# ನಿಮ್ಮ ಕಣ್ಣುಗಳನ್ನು ಮುಚ್ಚಿರಿ

ಅವನತಿ ಹಾಗು ಪಾಪದ ದೆಸೆಯಿಂದ ಪ್ರಚಲಿತವಾಗಿರುವ ದುಸ್ಥಿತಿ, ದುರ್ಗತಿ,
ನೈತಿಕಶ್ರಮ, ಸಂಕಟಗಳ ದೃಶ್ಯಗಳಿಗೆ ನಿಮ್ಮ ಕಣ್ಣುಗಳನ್ನು ಒಂದು ನಿಮಿಷ
ಮುಚ್ಚಿ, ನಿಮ್ಮ ಮನೋನೇತ್ರಗಳಲ್ಲಿ ಪರಿಪೂರ್ಣವಾಗಿರುವ ಭೂಲೋಕದ ವೈಭವವನ್ನು
ಚಿತ್ರಿಸಿಕೊಳ್ಳಿ. ಪಾಪದ ಒಂದು ಸಣ್ಣ ಕಲೆಯೂ ಸಹ ಈ ಪರಿಪೂರ್ಣ ಸಮಾಜದ
ಶಾಂತಿ ಸಾಮರಸ್ಯವನ್ನು
ಹಾಳುಮಾಡಲಾರದು. ಕಹಿಯಾದ ಒಂದು ಯೋಚನೆಯಾಗಲಿ,
ನಿರ್ದಯ ನೋಟವಾಗಲಿ, ಮಾತಾಗಲಿ ಅಲ್ಲಿ ಇರುವುದಿಲ್ಲ.
ಪ್ರತಿಯೊಬ್ಬರ ಹೃದಯಗಳಲ್ಲಿ ಪ್ರೀತಿ ಉಕ್ಕಿ ಹರಿದು
ಇತರರ ಹೃದಯಗಳನ್ನು ಸ್ಪಂದಿಸುತ್ತದೆ. ಪ್ರತಿಕಾರ್ಯಗಳಲ್ಲೂ
ಪರಹಿತ ಚಿಂತನೆಯು ತೋರಿಬರುತ್ತದೆ, ಅಲ್ಲಿ ಇನ್ನು ರೋಗವಾಗಲಿ, ನರಳಾಟವಾಗಲಿ,
ನೋವಾಗಲಿ, ಕೊಳೆಯುವಿಕೆಯ ಯಾವುದೇ ಸೂಚನೆಯಾಗಲಿ ಇಲ್ಲವೇ ಇವುಗಳ
ಭಯವಾಗಲಿ ಇರುವುದಿಲ್ಲ. ನೀವು ನೋಡಿರುವ ಪೂರ್ಣ
ಆರೋಗ್ಯವಂತನಾದ ಮತ್ತು ಸೊಗಸಾದ ರೂಪ, ವೈಶಿಷ್ಟ್ಯಗಳುಳ್ಳ ಮನುಷ್ಯನ
ಚಿತ್ರಣವನ್ನು ನೆನಪಿಗೆ ತಂದುಕೊಳ್ಳಿರಿ, ಪರಿಪೂರ್ಣವಾದ ಮನುಕುಲವು ಇದೆಲ್ಲಕ್ಕಿಂತಲೂ
ಮೀರಿದ ಮನೋಹರತೆಯಿಂದ ಕೂಡಿರುತ್ತದೆ.
ಆಂತರ್ಯ ಶುದ್ಧಿ, ಮಾನಸಿಕ ಹಾಗೂ ನೈತಿಕ ಪರಿಪೂರ್ಣತೆಯು ಪ್ರತಿಯೊಂದು
ಕಾಂತಿಯುತವಾದ ಮುಖದಲ್ಲಿ ಮುದ್ರಿತವಾಗಿ ಶೋಭಿಸುವುದು. ತಮ್ಮವರ ವಿಯೋಗದ
ದು:ಖದಿಂದ ಗೋಳಾಡುವವರು–ಪುನರುತ್ಥಾನದ ಕಾರ್ಯವು ಪೂರ್ಣವಾಗುವುದನ್ನು
ಗ್ರಹಿಸುವಾಗ ಅವರ ಕಣ್ಣೀರೆಲ್ಲಾ ಒರೆಸಲ್ಪಡುವುದು. (ಪ್ರಕಟಣೆ 21:4)
ಹೀಗೆ ಭೂಲೋಕದ ಮುಂದಿನ ಸಮಾಜವು ಇರುವುದು.